**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ81/2020**

**ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **20.06.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ. **ಜಿ.ಜಿ.ಎಸ್** ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ಮೂರು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು **ನಿಪಿ-1 ರಿಂದ ನಿಪಿ-3** ಎಂದು, ಇಂಡೆಕ್ಸ ಅಫ್ ಲ್ಯಾಂಡ್ ನ ದೃಡೀಕೃತ ನಕಲನ್ನು **ನಿಪಿ-4** ಎಂದು, ಡಿಮಾಂಡ್ ರಿಜಿಸ್ಟರ್ ನ್ನು **ನಿಪಿ-5** ಎಂದು, ಅಂಕನಹಳ್ಳಿ ಗ್ರಾಮ ಪಂಚಾಯತಿಯವರು ನೀಡಿರುವ ಹಿಂಬರಹವನ್ನು **ನಿಪಿ-6** ಎಂದು, ಮುಟೇಶನ್ ಆದೇಶದ ದೃಡೀಕೃತ ನಕಲನ್ನು **ನಿಪಿ-7** ಎಂದು, ದಿನಾಂಕ **30.06.2003** ರ ಕ್ರಯ ಪತ್ರದ ದೃಡೀಕೃತ ನಕಲನ್ನು **ನಿಪಿ-8** ಎಂದು, ದಿನಾಂಕ **11.03.2003** ರ ಕ್ರಯ ಪತ್ರದ ದೃಡೀಕೃತ ನಕಲನ್ನು **ನಿಪಿ-9** ಎಂದು, ದಿನಾಂಕ **24.10.2011** ರ ಕರಾರು ಪತ್ರದ ದೃಡೀಕೃತ ನಕಲನ್ನು **ನಿಪಿ-10** ಎಂದು, ದಿನಾಂಕ **25.08.2015** ರ ಕರಾರು ಮತ್ತು ಅವಧಿ ವಿಸ್ತರಣಾ ಪತ್ರದ ರದ್ದತಿ ಪತ್ರದ ದೃಡೀಕೃತ ನಕಲನ್ನು **ನಿಪಿ-11** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**